ನಟನೆ, ಒಂದೇ ಎರಡೇ... ನೆನಪಿಸಿಕೊಂಡು ನೆನಪಿಸಿಕೊಂಡು ಕಣ್ಣೀರು ಮಿಡಿಯುತ್ತಿದ್ದರು. ಅದ್ಯಾವಾಗ ನಿದ್ದೆಯ ಮಂಪರು ಹತ್ತಿತೋ... ಮನೆಯ ಮುಂದೆ ಪಕ್ಕದ ಮನೆ ನಂಜ ಬಾಯಿ ಬಾಯಿ ಬಡ್ಕೊಂಡು ಕೂಗಾಡೋದು ಕೇಳಿ ಗಡಬಡಿಸಿ ಎದ್ದು ಕುಳಿತರು. ಮನೆಯ ಒಳಗೆ ಇದ್ದವರೂ ಕುತೂಹಲದಿಂದ ಎದ್ದು ಹೊರ ಬಂದರು. ಮೊದಲು ಮೊದಲು ನಂಜ ಏನ್ ಹೇಳ್ತಾ ಇದ್ದಾನೊ ಅಂತ ಗೊತ್ತಾಗಲೇ ಇಲ್ಲ. ನಿಧಾನವಾಗಿ ಅರ್ಥವಾಗಿ ಎಲ್ಲರೂ ಹೊಲದತ್ತ ಓಡಿದರು. ಅಲ್ಲಿ ಕಂಡ ದೃಶ್ಯ ಕಂಡು ದಿಗ್ಭ್ರಾಂತರಾಗಿ ನಿಂತುಬಿಟ್ಟರು.

ಗಜಾನನ ನೆನ್ನೆ ನೇಣು ಹಾಕಿಕೊಂಡಿದ್ದ ಮರಕ್ಕೆ ರುದ್ರೇಶ ಕೂಡಾ ನೇಣು ಹಾಕಿಕೊಂಡು ಪ್ರಾಣಬಿಟ್ಟಿದ್ದ. ಅದ್ಯಾವಾಗ ಎದ್ದು ಇಲ್ಲಿಗೆ ಬಂದು ನೇಣು ಹಾಕಿಕೊಂಡನೊ ಅವನ ಜೊತೆ ಮಲಗಿದ್ದವರಿಗೆ ತಿಳಿಯಲೇ ಇಲ್ಲ. ಗೆಳೆಯರಿಗೆ ಈಗ ಮತ್ತೊಂದು ಆಘಾತ. ಇಬ್ಬರು ಗೆಳೆಯರನ್ನು ಕಳೆದುಕೊಂಡ ನೋವು. ಗೆಳೆಯರು, ಗಜಾನನನ ಮನೆಯವರು, ಊರಿನವರು ಎಲ್ಲರೂ, 'ಎಂಥ ಗೆಳೆತನ! ಸಾವಿನಲ್ಲೂ ಒಂದಾದರಲ್ಲ' ಅಂತ ಕನಿಕರದ ಜೊತೆಗೆ, ತುಂಬು ಜೀವನವನ್ನು ಹೀಗೆ ಅಂತ್ಯಗೊಳಿಸಿಕೊಂಡರಲ್ಲ ಎಂದು ವ್ಯಥೆ ಪಟ್ಟುಕೊಂಡರು. ಮತ್ತೆ ಪೊಲೀಸ್‌ಗೆ ಕರೆ ಹೋಯಿತು. ಅವರು ಬಂದು ವಿಧಿವಿಧಾನಗಳನ್ನು ಮಾಡಿ ಮುಗಿಸಿ ಅಸ್ಪತ್ರೆಗೆ ಶವ ಕಳಿಸಿ, ಅಲ್ಲಿಂದ ಪೋಸ್ಟ್‌ಮಾರ್ಟಂ ಮುಗಿಸಿ, ಮತ್ತೆ ಇಲ್ಲಿಗೇ ರುದ್ರೇಶನ ಶವವನ್ನು ಅವನ ಗೆಳೆಯರು ತಂದರು. ರುದ್ರೇಶನಿಗೆ ಬಂಧುಬಳಗ ಯಾರಿದ್ದರು ಎಂದೇ ತಿಳಿದಿರಲಿಲ್ಲ. ಅವನದು ಯಾವ ಊರು, ಯಾರು ಅವನ ಹೆತ್ತವರು ಅಂತ ಗೊತ್ತಿಲ್ಲದ ಕಾರಣ, ಅವನ ಶವಸಂಸ್ಕಾರವನ್ನು ಗಜಾನನನ ಸಂಸ್ಕಾರ ನಡೆದಿದ್ದ ಜಾಗದಲ್ಲಿಯೇ ಮಾಡಲು ಗಜಾನನನ ಅಪ್ಪನಿಂದ ಅನುಮತಿ ಪಡೆದು ಅಗ್ನಿಸ್ಪರ್ಶ ಮಾಡಿದರು. 'ಇದೇನಪ್ಪ ಗ್ರಾಚಾರ, ನೆನ್ನೆ ಅವನು ಇವತ್ತು ಇವನು, ಮಾತಾಡ್ಕಂಡಂಗೆ ಪಿರಾಣ ಬುಟ್ರಲ್ಲ, ಅಂತದ್ದೇನಾಗಿತ್ತು ಇವಕ್ಕೆ' ಅಂತ ಜನ ಮಾತಾಡಿಕೊಳ್ಳುತ್ತಿದ್ದಾಗ, 'ಅವರು ಹೋಗಿದ್ದೇ ಒಳ್ಳೆಯದಾಯ್ತು ಬುಡಿ, ಜೀವಂತವಾಗಿದ್ರೆ ಅವರುನ್ನಾ ಬಾಳಾಕೆ ಬುಡ್ತಾ ಇದ್ದರಾ' ಅಂತ ರುದ್ರೇಶನ ಗೆಳೆಯನೊಬ್ಬ ಪಟ್ಟಂತ ನುಡಿದುಬಿಟ್ಟ. 'ಅದ್ಯಾಕೆ ಅಂಗಂತೀಯಾ, ನಾವೇನು ಬಾಳೋಕೆ ಬುಡ್ದೇ ಇನ್ನೇನು ಮಾಡ್ತಾ ಇದ್ವು ಚಂದ್ರ' ಎಂದು ಅದನ್ನು ಕೇಳಿಸಿಕೊಂಡ ಗ್ರಾಮದವರು ಕೇಳಿದರು.

'ಅಯ್ಯೊ ಬುಡಿ, ಈಗ್ಯಾಕೆ ಅದೆಲ್ಲ. ಅವರಿಬ್ಬರು ವೊಂಟೋದ್ರಲ್ಲ. ಅಲ್ಲಾದರೂ ಜೊತ್ಯಾಗಿರಲಿ' ಎಂದು ಒಗಟಿನಂತೆ ಭಾರವಾದ ದನಿಯಲ್ಲಿ ನುಡಿದು ಚಂದ್ರ ಅಲ್ಲಿಂದ ಹೊರಡಲು ಅನುವಾದಾಗ, ಜನ ಅವನನ್ನು ಬಿಡದೆ, 'ಒಗಟಿನಂತೆ ಮಾತಾಡಿ ಒಂಟೋಗ ಬ್ಯಾಡ ಕಣ್ಲಾ, ಅದೇನು ಇಷ್ಟಾ ಅಂತ ಏಳು' ಅಂತ ಪಟ್ಟುಹಿಡಿದಾಗ ಅವನು ವಿಧಿ ಇಲ್ಲದೆ ಹೇಳಬೇಕಾಯ್ತು.

'ಗಜಾನನ ನಾಟಕದಾಗೆ ಹೆಣ್ಣು ಪಾಲ್ಟು ಮಾಡ್ತಾ ಮಾಡತಾ ತಾನು ಹೆಣ್ಣೇ ಎಂದು ಅವನ ಮನಸ್ಸು ತಿಳ್ಕಂಡು, ಹೆಣ್ಣಿನಂತೆಯೇ ಇರಲು ಪ್ರಾರಂಭಿಸಿದ್ದ. ಹೆಣ್ಣಿನ ಭಾವನೆಗಳೇ ಅವನಲ್ಲಿ ಬೆಳೆದುಬಿಟ್ಟವು. ಮನೆಯಲ್ಲಿ ಇದು ಗೊತ್ತಾದರೆ ಅಪ್ಪ–ಅಕ್ಕತಂಗೀರು ಎದೆ ಒಡ್ಕಂಡಾರು ಅಂತ ಯಾರಿಗೂ ಅನುಮಾನ ಬರದಂತೆ ನಡೆದುಕೊಳ್ಳುತ್ತಿದ್ದ. ಹೆಂಗಸರ ಬಟ್ಟೆ ಹಾಕಿಕೊಳ್ಳುವುದು, ಅವರಂತೆ ಹಾವಭಾವ ತೋರುವುದು ಅವನಿಗೆ ಗೊತ್ತಿಲ್ಲದಂತೆ ಬಂದುಬಿಟ್ಟಿತು. ನಾಟಕದಲ್ಲಿ ನಾಯಕನ ಪಾತ್ರ ಮಾಡುವ ರುದ್ರೇಶನ ಮೇಲೆ ಪ್ರೀತಿಯೂ ಬೆಳೆದು ಬಿಟ್ಟಿತು. ರುದ್ರೇಶನಿಗೂ ಇದು ಗೊತ್ತಾಗಿ, ಅವನೂ ಕೂಡಾ ಗಜಾನನನ್ನು ಅತಿಯಾಗಿ ಹಚ್ಚಿಕೊಂಡು ಬಿಟ್ಟ. ಇಬ್ಬರೂ ಗಂಡ ಹೆಂಡತಿಯರಂತೆ ಬಾಳ್ವೆ ಮಾಡೋಣ ಅಂತ ನಿರ್ಧರಿಸಿಕೊಂಡು ಬಿಟ್ಟಿದ್ದರು. ಆದರೆ ಸಮಾಜದ ಭಯ ಇಬ್ಬರನ್ನೂ ಕಾಡುತ್ತಿತ್ತು. ಸಮಾಜದ ಜೊತೆ ಗಜಾನನನಿಗೆ ಮನೆಯವರ ಭಯ–ಆತಂಕ ಹೆಚ್ಚಾಗಿತ್ತು. ಆದರೆ ಒಬ್ಬರನ್ನು ಬಿಟ್ಟು ಒಬ್ಬರು ಇರಲಾರೆ ಅನ್ನುವ ಮಟ್ಟಕ್ಕೆ ಬಂದ ಮೇಲೆ, 'ಮನೆಯವರಿಗೆ ಹೇಳುವುದೇ ಬೇಡ, ನಾಟಕ ಅಂತ ಹೊರಗಿದ್ದು ಬಿಡುವುದು. ಇಬ್ಬರೂ ಒಂದು ಮನೆ ಮಾಡಿಕೊಂಡು ಈ ಸಮಾಜಕ್ಕೂ ಗೊತ್ತಾಗದ ಹಾಗೆ ಇದ್ದುಬಿಡುವುದು' ಅಂತ ಇಬ್ಬರೂ ನಿರ್ಧರಿಸಿದ್ದರು. ಆದರೆ, ಮನೆಯಲ್ಲಿ ಮದುವೆ ತಯಾರಿ ನಡೆಸಿದ್ದು, ಬಲವಂತವಾಗಿ ತನ್ನ ಮದುವೆ ಮಾಡಿಯೇ ಬಿಡುತ್ತಾರೆ ಅಂತ ಹೆದರಿ ಗಜಾನನ ಸಾವಿನ ದಾರಿ ಹಿಡಿದ. ಅವನನ್ನ ಕಳೆದುಕೊಂಡು ಒಂಟಿಯಾಗಿ ಬಾಳಲಾರದೆ ರುದ್ರೇಶ ಕೂಡಾ ಗೆಳೆಯನ ಹಾದಿಯನ್ನೇ ಹಿಡಿದು ಬಿಟ್ಟ. ತಮ್ಮ ವಿಷಯ ಯಾರಿಗೂ ಗೊತ್ತಿಲ್ಲ ಅಂತ ಅಂದುಕೊಂಡಿದ್ದರು, ಆದರೆ ನನಗೆ ಎಲ್ಲಾ ಗೊತ್ತಿತ್ತು. ಅವರಿಗೆ ನಿಮ್ದೇ ಸರಿ ಅಂತಾನೂ ಹೇಳಲಾರದೆ, ತಪ್ಪು ಅಂತಾನೂ ಹೇಳಲಾರದೆ ಸುಮ್ಮನಿದ್ದುಬಿಟ್ಟಿದ್ದೆ. ನಾನಾದರೂ ಧೈರ್ಯ ಹೇಳಬೇಕಿತ್ತು. ಮನೆಯಲ್ಲಿ ಮದ್ವೆ ಮಾಡ್ತಾರೆ ಅಂತ ಗಜಾನನ ಪೇಚಾಡಿಕೊಳ್ಳುವಾಗಲೆಲ್ಲ ಅವರ ಮನೆಗೆ ಬಂದು ಅವನ ಮದ್ವೆ ಮಾಡೋಕೆ ಬಲವಂತ ಮಾಡಬೇಡಿ ಅಂತ ಹೇಳ್ತಾನೇ ಇದ್ದೆ. ಆದ್ರೆ ಅವರು ನನ್ನ ಮಾತನ್ನ ಕೇಳಲೇ ಇಲ್ಲ, ಮದ್ವೆ ವಿಷಯವೇ ಅವನು ಸಾಯೋಕೆ ಕಾರಣ ಆಯ್ತು. ಇವನ ಸಾವು ರುದ್ರೇಶನ ಸಾವಿಗೂ ಕಾರಣ ಆಯ್ತು' ಎಂದು ಬಿಕ್ಕಳಿಸುತ್ತಲೇ ಗೆಳೆಯರ ಬದುಕಿನ ರಹಸ್ಯವನ್ನೆಲ್ಲ ಎಲ್ಲರೆದುರೂ ತೆರೆದು ಇಟ್ಟು ಬಿಟ್ಟ. ಎಲ್ಲವನ್ನು ಕೇಳಿಸಿಕೊಂಡ ಗಜಾನನನ ಅಪ್ಪ 'ಅಯ್ಯೋ, ಇದು ನಂಗೆ ಗೊತ್ತಾಗದೆ ಇದ್ರೆ ಚೆನ್ನಾಗಿತ್ತಲ್ಲೊ, ನೀ ಯಾಕಲೇ ಇದನ್ನೆಲ್ಲ ಎಲ್ಲಾರ ಮುಂದೂ ಹೇಳಿ ನನ್ನ ಮಗನ ಮರ್ವಾದಿ ಕಳ್ದು, ನನ್ನೂ ಸಾಯಿಸಿ ಬುಟ್ಟುಲ್ಲೊ ಚಂದ್ರ' ಎಂದು ದೇವಪ್ಪ ಜೋರಾಗಿ ರೋದಿಸಿದ. ಎಲ್ಲರಿಗೂ ದಿಗ್ಭ್ರಮೆಯಾಗಿತ್ತು. ಗಜಾನನನ ಸಾವಿನ ಹಿಂದೆ ಇಂಥದ್ದೊಂದು ರಹಸ್ಯ ಇತ್ತೆಂದೇ ಯಾರಿಗೂ ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ.

ಇದನ್ನೆಲ್ಲ ಕೇಳಿದ ವಾರಿಜ ಏಕೊ ತಳಮಳಗೊಂಡಿದ್ದಳು. ಯಾವುದೋ ಅಸ್ಪಷ್ಟ ಕಲ್ಪನೆಯಲ್ಲಿ ನಡುಗಿದ್ದಳು. ರಾತ್ರಿ ದೊಡ್ಡಮ್ಮನನ್ನು ಬಿಟ್ಟು ವೀರೂ ಬರಲೇ ಇಲ್ಲ. ವಾರಿಜಳಿಗೂ ಮಗನನ್ನು ಹೊಡೆದು, ಬರೆ ಹಾಕಿ ನೋಯಿಸಿದ್ದು ಪಶ್ಚಾತ್ತಾಪವಾಗಿತ್ತು. ವೀರು ನೋವಿನಿಂದ ನರಳುತ್ತ ಅಳುತ್ತಿದ್ದದ್ದನ್ನು ನೆನೆದು ಮೌನವಾಗಿಯೇ ಕಣ್ಣೀರು ಹಾಕಿದಳು. ಕೋಪದಿಂದ ಮಾದುವೂ ಕೂಡಾ ಹೆಂಡತಿಯ ಬಳಿ ಮಾತಾಡಿರಲಿಲ್ಲ. ಅಣ್ಣನ ಜೊತೇನೆ ಅವನ ಮನೆಗೆ ಹೋಗಿ, ಅತ್ತಿಗೆಯ ಬಲವಂತಕ್ಕೆ ಕೇಸರಿಬಾತು ಕೋಡುಬಳೆ ತಿಂದು ಬಂದಿದ್ದರಿಂದ ಊಟವನ್ನೂ ಮಾಡದೆ ಮಲಗಿಬಿಟ್ಟ. ಲತಾ, ಭಾಮ ಕೂಡಾ 'ಊಟ ಬೇಡ ಕಣಮ್ಮ, ಹೊಟ್ಟೆ ತುಂಬಿ ಹೋಗ್ತೈತೆ. ದೊಡ್ಡಮ್ಮ ನಿಂಗು ತಿಂಡಿ ಕೊಟ್ಟೈತೆ ತಗೋ, ತಿನ್ನು, ವೀರು ಅಲ್ಲೇ ಮಂಕತನಂತೆ' ಅಂತ ಹೇಳಿ ಮಲಗಿಬಿಟ್ಟರು. ತಿಂಡಿ ತಿನ್ನುವ ಮನಸ್ಸಾಗದೆ ಕೋಣೆಗೆ ಬಂದು ಗಂಡನ ಪಕ್ಕ ಉರುಳಿಕೊಂಡಳು. ಇಡೀ ರಾತ್ರಿ ನಿದ್ದೆ ಬರದೆ ಒದ್ದಾಡಿದಳು. ಮನದಲ್ಲಿ ಏನೋ ಅಸ್ಪಷ್ಟ ಭಯ, ಆತಂಕ, ಏನೇನೊ ಕಲ್ಪನೆಗಳು ಅವಳನ್ನು ಕಾಡಿ ಹಿಂಸಿಸಿದವು. ಬೆಳಗಿನ ಜಾವ ನಿದ್ದೆ ಹತ್ತಿತ್ತು. ಬೆಳಗ್ಗೆ ಎಷ್ಟೊತ್ತಾದರೂ ಎದ್ದಿಲ್ಲದ ಹೆಂಡತಿ ಬಗ್ಗೆ ಆತಂಕನಿಸಿದರೂ, ನೆನ್ನೆಯ ಮುನಿಸು ಇನ್ನೂ ಇದ್ದುದರಿಂದ ತಾನೇ ಹಾಲು ಕರೆದು ಪಕ್ಕದಲ್ಲಿದ್ದ ಡೈರಿಗೆ ಹಾಕಿ ಬಂದ. ಕೊಟ್ಟಿಗೆ ಗುಡಿಸಿ ಸಗಣಿ ಎತ್ತಿ ತಿಪ್ಪೆಗೆ ಹಾಕಿ ಬಂದರೂ ವಾರಿಜ ಎದ್ದಿಲ್ಲ. ಏನಾಯ್ತು ಇವಳಿಗೆ, ಅದ್ಯಾಕೆ ಅಂಗೆ ಮಲ್ಗವ್ಳೆ ಅಂತ ಅಂದುಕೊಳ್ಳುತ್ತಲೇ ಅಡುಗೆಮನೆಗೆ ಹೋಗಿ ಹಾಲು ಕಾಸಿ, ಕಾಫಿ ಮಾಡಿದ. ಅಷ್ಟರೊಳಗೆ ಲತಾ–ಭಾಮ ಎದ್ದು ಮುಖ ತೊಳೆದು 'ಅಮ್ಮಾ' ಅಂತ ಸೀದಾ ಒಳಗೆ ಬಂದರೆ, ಅಪ್ಪ ಕಾಫಿ ಮಾಡ್ತಾ ಇರೋದ ನೋಡಿ 'ಅದ್ಯಾಕಪ್ಪ ನೀನು ಕಾಫಿ ಕಾಸ್ತಾ ಇದ್ದೀಯಾ, ಅಮ್ಮ ಎಲ್ಲಿ' ಎಂದು ಕೇಳಿದಳು ಲತಾ. 'ನಿಮ್ಮಮ್ಮ ಯಾಕೋ ಕಾಣೆ ಇನ್ನೂ ಎದ್ದಿಲ್ಲ. ಕಾಫಿ ಕುಡ್ದು, ಇವತ್ತು ದೊಡ್ಡಮ್ಮನ್ನೆ ತಿಂಡಿ ಮಾಡ್ಕೊಡಿ ಅಂತ ಕೇಳಿ, ಅಲ್ಲೇ ತಿಂದು ಹೋಗಿ, ಶಾನೇ ಒತ್ತಾತು, ನಾನು ವಲದತ್ರ ವೋಯ್ತೀನಿ' ಅಂತ ಹೇಳಿ ಎರಡು ಲೋಟಕ್ಕೆ ಕಾಫಿ ಹಾಕಿ ಮಕ್ಕಳಿಗೆ ನೀಡಿದ. ಮಕ್ಕಳಿಬ್ಬರೂ ಬ್ಯಾಗೂ ಬಟ್ಟೆ ತಗೊಂಡು ದೊಡ್ಡಪ್ಪನ ಮನೆಗೆ ಓಡಿದವು. 'ಅಮ್ಮ ಇನ್ನೂ ಎದ್ದಿಲ್ಲ, ಅದಕ್ಕ ಅಪ್ಪ ಇಲ್ಲಿಗೆ ಓಗಿ ಅಂತು' ಅಂತ ಹೇಳಿ, ಅಲ್ಲೇ ಸ್ನಾನ ಮುಗಿಸಿ ಸಮವಸ್ತ್ರ ಧರಿಸಿ, ದೊಡ್ಡಮ್ಮ ಕೊಟ್ಟ ತಿಂಡಿ ತಿಂದು ಎಲ್ಲರೂ ಒಟ್ಟಿಗೆ ಮನೆ ಬಿಟ್ಟರು.

ಎಲ್ಲರದ್ದೂ ಒಂದೇ ಶಾಲೆ. ಒಂದೊಂದು ಕ್ಲಾಸ್ ಹಿಂದೆ. ಆರು ಜನ ಮಕ್ಕಳು ಒಟ್ಟಿಗೆ ಒಂದೇ ಸಲ ಶಾಲೆಗೆ ಹೋಗಿ ಬರ್ತಾರೆ. ಎಲ್ಲರಿಗಿಂತ ಚಿಕ್ಕೋನು ವೀರೇಶ. ಸರ್ಕಾರಿ ಶಾಲೆಗೆ ಹೋಗ್ತಾರೆ. ಪ್ರೈವೇಟ್ ಶಾಲೆಗೆ ಹೋಗಬೇಕು ಅಂದ್ರೆ ವಾಹನದಲ್ಲೆ ಹೋಗಬೇಕು. ಒಬ್ಬರೋ ಇಬ್ಬರೋ ಆಗಿದ್ದರೆ ಅಲ್ಲಿಗೆ ಸೇರಿಸ್ತಾ ಇದ್ದರೇನೊ, ಆರು ಜನ ಅಂದಾಗ ಖರ್ಚು ಜಾಸ್ತಿ ಅಂತ ಹಿಂದೆ ಮುಂದೆ ನೋಡಿ, ಮನೆಗೆ ಹತ್ತಿರವಿರೋ ಸರ್ಕಾರಿ ಶಾಲೆಗೆ ಸೇರಿಸಿದ್ದಾರೆ. ವಾರಿಜಂಗೆ ಮಗನೊಬ್ಬನನ್ನಾದರೂ ಕಾನ್ವೆಂಟಿಗೆ ಸೇರಿಸಿಬೇಕು ಅನ್ನೋ ಆಸೆ ಇದ್ದರೂ